# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ</u>
# <u>ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ</u>

## ಸಿ.ಸಿ. 2363/2021

| | | | | |
|---|---|---|---|---|
| 01 | ಹೆಸರು | ನಾಗೇಂದ್ರ | ಸಿ ಡಬ್ಲೂ | **7** |
| 02 | ತಂದೆಯ ಹೆಸರು | ನಾರಾಯಣಗೌಡ | ಪಿಡಬ್ಲೂ | 7 |
| 03 | ವಯಸ್ಸು | 47 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ವ್ಯವಸಾಯ | 04.11.2025 | |
| 05 | ಊರು | ಯಾಚನಹಳ್ಳಿ ಗ್ರಾಮ | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**</u>

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ಸ್ಥಳ ಮಹಜರು ಆಗಿದ್ದು ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ ಪಿ 2(ಸಿ) ಎಂದು ಗುರುತಿಸಲಾಯಿತು. ನಾನು ಸದರಿ ಸಹಿಯನ್ನು ಎರಡೂವರೆ ವರ್ಷಗಳ ಹಿಂದೆ ಗಲಾಟೆಯಾದ ಚಾ ಸಾ 1ರವರ ಮನೆಯ ಮುಂಭಾಗದಲ್ಲಿ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ನನ್ನೊಂದಿಗೆ ಚಾ ಸಾ 2, ಚಾ ಸಾ 6 ಮತ್ತು ಕುಮಾರ ಎನ್ನುವವರು ಇದ್ದರು. ಆ ಸಂದರ್ಭದಲ್ಲಿ ಪೊಲೀಸರು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.ಸದರಿ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ. ನಂತರ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಮಹಜರನ್ನು 10.00-11.00 ಗಂಟೆಗೆ ಮಾಡಿರುತ್ತಾರೆ. ದಿನಾಂಕ ನನಗೆ ನೆನಪಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

<u>**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**</u>

ದಿಃ13.06.2021 ರಂದು ಬೆಳಗ್ಗೆ 10.30-11.30 ಗಂಟೆಯ ಸಮಯದಲ್ಲಿ ಚಾ ಸಾ 2ರವರು ತೋರಿಸಿರುವ ಸ್ಥಳದಲ್ಲಿ ಪೊಲೀಸರು ನಿ ಪಿ 2 ರಂತೆ ಸ್ಥಳ ಮಹಜರು ಜರುಗಿಸಿದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಬಿ ಎಸ್  ವಕೀಲರಿಂದಃ**

ಗಲಾಟೆ ಆದ ವಿಚಾರವಾಗಿ ಪೊಲೀಸರು ಮನೆಯ ಬಳಿ ಬಂದಾಗ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಗಲಾಟೆ ಆದ 10 ನಿಮಿಷಕ್ಕೆ ಪೊಲೀಸರು ಬಂದಿರುತ್ತಾರೆ. ಮು.ಮಾ. 1 ಅನ್ನು ಚಾ ಸಾ 1 ರವರೇ ತಮಗೆ ಆರೋಪಿಯು ಇದೇ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿ ಪೊಲೀಸರಿಗೆ ಎತ್ತಿಕೊಟ್ಟಿರುತ್ತಾರೆ. ನನಗೆ ಗಲಾಟೆ ಆದ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ನಾನು ಹೇಳುವಂತೆ ಅಲ್ಲಿ ಯಾವುದೇ ಗಲಾಟೆ ಆಗಿರುವುದಿಲ್ಲ ಮತ್ತು ಪೊಲೀಸರು  ಮಹಜರು ಕ್ರಮ ಜರುಗಿಸಿರುವುದಿಲ್ಲ ಮತ್ತು ಮು. ಮಾ. 1 ಅನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.   ಚಾ ಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ  ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.